# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 08 |
| ಸದಸ್ಯರ ಹೆಸರು | : | ಶ್ರೀ ಕೆ. ಹರೀಶ್ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾಗಿದ ದಿನಾಂಕ | : | 13.02.2024 |
| ಉತ್ತರಿಸುವ ಸಚಿವರು | : | ಮಾನ್ಯ ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು. |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ 2018-19 ಮತ್ತು 2020ನೇ ಸಾಲಿನಲ್ಲಿ ಮಂಗಳೂರು ಮಹಾನಗರದಲ್ಲಿ ಅಮೃತ್ ಮತ್ತು ಎಡಿಬಿ ಯೋಜನೆಯಲ್ಲಿ ಕೈಗೊಂಡಿರುವ ಕಾಮಗಾರಿಗಳಾವುವು; (ಕಾಮಗಾರಿಗಳ ವಿವರ ಹಾಗೂ ಅಂದಾಜು ವೆಚ್ಚದ ಮಾಹಿತಿಯನ್ನು ಒದಗಿಸುವುದು) | ಕರ್ನಾಟಕ ನಗರ ಮೂಲಸೌಕರ್ಯ ಮತ್ತು ಹಣಕಾಸು ನಿಗಮ ನಿಯಮಿತದ ವತಿಯಿಂದ ಕರ್ನಾಟಕ ಸಮಗ್ರ ಮತ್ತು ಸುಸ್ಥಿರ ಜಲ ಸಂಪನ್ಮೂಲ ನಿರ್ವಹಣೆ- ಜಲಸಿರಿ (ಕ್ವಿಮಿಪ್) ಯೋಜನೆಯಡಿ ರಾಜ್ಯದ ಆಯ್ದ 8 ನಗರ/ಪಟ್ಟಣಗಳಲ್ಲಿ ಏಷ್ಯನ್ ಅಭಿವೃದ್ಧಿ ಬ್ಯಾಂಕ್ (ಎಡಿಬಿ) ಮತ್ತು ಅಮೃತ್ ನೆರವಿನೊಂದಿಗೆ ಕುಡಿಯುವ ನೀರು ಸರಬರಾಜು ಮತ್ತು ಒಳಚರಂಡಿ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ಮಂಗಳೂರು ಮಹಾನಗರದಲ್ಲಿ ಅಮೃತ್ ಮತ್ತು ಎಡಿಬಿ ಯೋಜನೆಯಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರ ಹಾಗೂ ಅಂದಾಜು ವೆಚ್ಚದ ಮಾಹಿತಿಯನ್ನು **ಅನುಬಂಧ-1 ರಲ್ಲಿ** ನೀಡಲಾಗಿದೆ.<br><br>ಪೌರಾಡಳಿತ ನಿರ್ದೇಶನಾಲಯದ ವತಿಯಿಂದ ಕೇಂದ್ರ ಪುರಸ್ಕೃತ ಅಮೃತ್ ಯೋಜನೆಯಡಿ ಮಹಾನಗರಪಾಲಿಕೆ ವತಿಯಿಂದ 4 ಹಸಿರು ಜಾಗ ಮತ್ತು ಉದ್ಯಾನವನ ಅಭಿವೃದ್ಧಿ ಕಾಮಗಾರಿಗಳು ಮತ್ತು ಒಂದು ಮಳೆ ನೀರು ಚರಂಡಿ ಕಾಮಗಾರಿಯನ್ನು ಕೈಗೊಂಡು ಪೂರ್ಣಗೊಳಿಸಲಾಗಿರುತ್ತದೆ. ಸಂಬಂಧಿಸಿದ ವಿವರಗಳನ್ನು **ಅನುಬಂಧ-2 ರಲ್ಲಿ** ನೀಡಲಾಗಿದೆ. |
| ಆ) | ಕಳೆದ 5-6 ವರ್ಷಗಳಿಂದ ಸದರಿ ಕಾಮಗಾರಿಗಳು ಪ್ರಗತಿ ಕಾಣದೆ ನಿಧಾನಗತಿಯಲ್ಲಿ ಸಾಗಿರಲು ಕಾರಣಗಳೇನು; | ಕಾಮಗಾರಿಗಳು ನಿಧಾನಗತಿಯಲ್ಲಿ ಸಾಗಿರುವುದಕ್ಕೆ ಕೆಲವೊಂದು ಪ್ರಮುಖ ಕಾರಣಗಳು ಈ ಕೆಳಗಿನಂತಿವೆ.<br>• ಮೊದಲನೇ ಹಾಗೂ ಎರಡನೇ ಕೋವಿಡ್-19 ಲಾಕ್‌ಡೌನ್ ಪರಿಣಾಮದಿಂದ ಕಾರ್ಮಿಕರ ಹಾಗೂ ಸಲಕರಣೆಗಳ ಕೊರತೆ.<br>• ರಾಷ್ಟ್ರೀಯ ಹೆದ್ದಾರಿ, ರೈಲ್ವೇ, ಲೋಕೋಪಯೋಗಿ, ಅರಣ್ಯ, ಹೆಸ್ಕಾಂ ಹಾಗೂ ಇತರೆ ಇಲಾಖೆಗಳ ಅನುಮತಿ/ ಪರವಾನಗಿಯಲ್ಲಿ ವಿಳಂಬ. |

| | | |
|---|---|---|
| | | • ಮೇಲ್ಮಟ್ಟದ ಹಾಗೂ ನೆಲಮಟ್ಟದ ಜಲಸಂಗ್ರಹಗಾರ ಹಾಗೂ ನೀರು ಶುದ್ಧೀಕರಣ ಘಟಕ ನಿರ್ಮಾಣ ಜಾಗಗಳ (ಖಾಸಗಿ ಮತ್ತು NMPA) ಭೂ ಹಸ್ತಾಂತರದಲ್ಲಿ ವಿಳಂಬ.<br>• ಗುತ್ತಿಗೆದಾರರು ಅಗತ್ಯ ಕೆಲಸಗಾರರು ಹಾಗೂ ಯಂತ್ರೋಪಕರಣಗಳನ್ನು ಒದಗಿಸದಿರುವುದು ಗುತ್ತಿಗೆದಾರರ ವೈಫಲ್ಯ ಇತ್ಯಾದಿ.<br>ಕಾಮಗಾರಿವಾರು ವಿಳಂಬಕ್ಕೆ ಕಾರಣಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಇ) | ಅಂದಾಜು 300 ಕೋಟಿಗೂ ಹೆಚ್ಚು ವೆಚ್ಚದ ಈ ಕಾಮಗಾರಿಗಳಿಂದ ಮಂಗಳೂರು ನಗರಕ್ಕೆ ಬಹು ಉಪಯೋಗವಾಗಲಿದ್ದು ಸದರಿ ಕಾಮಗಾರಿಗಳನ್ನು ನಿರ್ದಿಷ್ಟ ಕಾಲಮಿತಿಯೊಳಗೆ ಮುಕ್ತಾಯಗೊಳಿಸಲು ಸರ್ಕಾರ ಕೈಗೊಳ್ಳಬಹುದಾದ ಕ್ರಮಗಳೇನು? | ಕಾಮಗಾರಿಗಳನ್ನು ನಿರ್ದಿಷ್ಟ ಕಾಲಮಿತಿಯೊಳಗೆ ಮುಕ್ತಾಯಗೊಳಿಸಲು ಈ ಕೆಳಗಿನಂತೆ ಕ್ರಮವಹಿಸಲಾಗಿದೆ.<br>• ಗುತ್ತಿಗೆದಾರರಿಗೆ ಕಾಮಗಾರಿಯ ಅನುಷ್ಠಾನದಲ್ಲಿ ವಿಳಂಭದ ಕುರಿತು ತಿಳುವಳಿಕೆ (ನೋಟಿಸ್) ಪತ್ರಗಳನ್ನು ನೀಡಲಾಗಿರುತ್ತದೆ.<br>• ಕಾರ್ಯಕಾರಿ ವ್ಯವಸ್ಥಾಪಕರು, ಕ್ವಿಮಿಪ್-ಕೆಯುಐಡಿಎಫ್‌ಸಿ ರವರಿಂದ ಪ್ರತಿ 15 ದಿನಗಳಿಗೊಮ್ಮೆ ಕಾಮಗಾರಿಗಳ ಸ್ಥಳ ಪರಿಶೀಲನೆ ನಡೆಸಿ ಪ್ರಗತಿಯ ಕುರಿತು ಪರಾಮರ್ಶೆ ಮಾಡಲಾಗುತ್ತಿದೆ.<br>• ವ್ಯವಸ್ಥಾಪಕ ನಿರ್ದೇಶಕರು, ಕೆಯುಐಡಿಎಫ್‌ಸಿ ರವರು ಪ್ರತಿ ಮಾಹೆ ಕಾಮಗಾರಿಗಳ ಪ್ರಗತಿ ಪರಿಶೀಲನೆ ನಡೆಸುತ್ತಿದ್ದು, ಗುತ್ತಿಗೆದಾರ ಮುಖ್ಯಸ್ಥರು ಹಾಗೂ ನಗರ ಸ್ಥಳಿಯ ಸಂಸ್ಥೆಯ ಮುಖ್ಯಸ್ಥರೊಂದಿಗೆ ಸಭೆ ನಡೆಸಿ, ತ್ವರಿತವಾಗಿ ಕಾಮಗಾರಿಗಳನ್ನು ಮುಕ್ತಾಯಗೊಳಿಸಲು ಸೂಚಿಸಲಾಗುತ್ತಿದೆ.<br>• ಸರ್ಕಾರದ ಮಟ್ಟದಲ್ಲಿಯೂ ಸಹ ಉನ್ನತಾಧಿಕಾರಿಗಳು ಕಾಮಗಾರಿಗಳ/ ಯೋಜನೆಯ ಪ್ರಗತಿ ಪರಿಶೀಲನೆಯನ್ನು ನಿಯಮಿತವಾಗಿ ನಡೆಸುತ್ತಿದ್ದು, ಕಾಮಗಾರಿಗಳನ್ನು ಶೀಘ್ರವಾಗಿ ಪೂರ್ಣಗೊಳಿಸಲು ನಿರ್ದೇಶನ ನೀಡಲಾಗುತ್ತಿದೆ. |

ಕಡತ ಸಂಖ್ಯೆ:ನಅಇ 19 ಪಿಆರ್‌ಜೆ 2024

12/02/2024

**(ಬಿ. ಎಸ್. ಸುರೇಶ)**

ನಗರಾಭಿವೃದ್ಧಿ ಮತ್ತು ನಗರ ಯೋಜನೆ ಸಚಿವರು

| ಅನುಬಂಧ-1, ಮಂಗಳೂರು ಮಹಾನಗರದಲ್ಲಿ ಅಮೃತ್ ಮತ್ತು ಎಡಿಬಿ ಯೋಜನೆಯಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರ | | | | | | | | |
|---|---|---|---|---|---|---|---|---|
| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಗುತ್ತಿಗೆದಾರರು | ಕಾಮಗಾರಿ ಪ್ರಾರಂಭ ದಿನಾಂಕ | ಕಾಮಗಾರಿ ಮುಕ್ತಾಯ ದಿನಾಂಕ | ಗುತ್ತಿಗೆ ಮೊತ್ತ(ರೂ. ಕೋಟಿಗಳಲ್ಲಿ) | ಭೌತಿಕ ಪ್ರಗತಿ | ಆರ್ಥಿಕ ಪ್ರಗತಿ(ರೂ. ಕೋಟಿಗಳಲ್ಲಿ) | ವಿಳಂಬಕ್ಕೆ ಕಾರಣಗಳು |
| ಅಮೃತ್ ಯೋಜನೆ | | | | | | | | |
| 1 | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಒಳಚರಂಡಿ ಮಾರ್ಗದ ಪುನರುಜ್ಜೀವನ ಮತ್ತು ಬಿಟ್ಟುಹೋದ ಒಳಚರಂಡಿ ಮಾರ್ಗದ ಕಾಮಗಾರಿ.<br>ಪ್ಯಾಕೇಜ್ ಸಂಖ್ಯೆ : AMRUT MNG01 | ಮೆ. ಕೆ.ಬಿ.ಆರ್ ಇನ್ಫ್ರಾಟೆಕ್ ಲಿಮಿಟೆಡ್, ಬೆಂಗಳೂರು | 07.06.2018 | 31.03.2023 | 77.59 | 100% | 77.59 | * ಮೊದಲನೇ ಹಾಗೂ ಎರಡನೇ ಕೋವಿಡ್-19 ಲಾಕ್‌ಡೌನ್ ಪರಿಣಾಮದಿಂದ ಕಾರ್ಮಿಕರ ಹಾಗೂ ಸಲಕರಣೆಗಳ ಕೊರತೆ.<br>* ರೈಲ್ವೆಇಲಾಖೆಯ ಅನುಮತಿಯಲ್ಲಿ ವಿಳಂಬ.<br>ಕಾಮಗಾರಿಯು ಪೂರ್ಣಗೊಂಡಿರುತ್ತದೆ. |
| 2 | ಮಂಗಳೂರು ನಗರದ ಒಳಚರಂಡಿ ಜಾಲದ ವ್ಯವಸ್ಥೆಯನ್ನು (ವಲಯ 1, 4 ಮತ್ತು 7) ಪುನರುಜ್ಜೀವನ ಮತ್ತು ಪುನರ್ ನಿರ್ಮಾಣ ಮಾಡುವ ಕಾಮಗಾರಿ. ಪ್ಯಾಕೇಜ್ ಸಂಖ್ಯೆ : AMRUTMNG02 | ಮೆ. ಸಿಂಪ್ಲೆಕ್ಸ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ | 06.03.2019 | 05.06.2022 | 44.53 | 33.41% | 14.88 | ಗುತ್ತಿಗೆ ದಾರರ ವೈಫಲ್ಯದಿಂದಾಗಿ ದಿನಾಂಕ:04.06.2022ರಂದು ಗುತ್ತಿಗೆಯನ್ನು ರದ್ದು ಗೊಳಿಸಲಾಗಿದ್ದು, ಉಳಿದ ಕಾಮಗಾರಿಗೆ ಮರು ಟೆಂಡರ್ ಕರೆದು. ಕಾಮಗಾರಿ ಪ್ರಗತಿಯಲ್ಲಿರುತ್ತದೆ |
| | | ಮೆ. ಕೆ.ಬಿ.ಆರ್ ಇನ್ಫ್ರಾಟೆಕ್ ಲಿಮಿಟೆಡ್ | 16.02.2023 | 15.08.2024 | 30.59 | 26.81% | 6.61 | |
| 3 | ಮಂಗಳೂರು ನಗರದ ಒಳಚರಂಡಿ ಜಾಲದ ವ್ಯವಸ್ಥೆಯನ್ನು (ವಲಯ 7 Laterrals) ಪುನರುಜ್ಜೀವನ ಮತ್ತು ಪುನರ್ ನಿರ್ಮಾಣ ಮಾಡುವ ಕಾಮಗಾರಿ. ಪ್ಯಾಕೇಜ್ ಸಂಖ್ಯೆ : AMRUTMNG03 | ಮೆ.ಸಿಂಪ್ಲೆಕ್ಸ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ | 06.03.2019 | 05.06.2022 | 32.77 | 17.08% | 5.6 | ಗುತ್ತಿಗೆ ದಾರರ ವೈಫಲ್ಯದಿಂದಾಗಿ ದಿನಾಂಕ:04.06.2022ರಂದು ಗುತ್ತಿಗೆಯನ್ನು ರದ್ದು ಗೊಳಿಸಲಾಗಿದ್ದು, ಉಳಿದ ಕಾಮಗಾರಿಗೆ ಮರು ಟೆಂಡರ್ ಕರೆದು. ಕಾಮಗಾರಿ ಪ್ರಗತಿಯಲ್ಲಿರುತ್ತದೆ |
| | | ಮೆ. ಕೆ.ಬಿ.ಆರ್ ಇನ್ಫ್ರಾಟೆಕ್ ಲಿಮಿಟೆಡ್ | 16.02.2023 | 15.08.2024 | 22.65 | 26.9% | 5.43 | |
| 4 | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಸಗಟು ನೀರು ಸರಬರಾಜು ವ್ಯವಸ್ಥೆಯ ಕಾಮಗಾರಿ,<br>ಪ್ಯಾಕೇಜ್ ಸಂಖ್ಯೆ: AMRUTMNG04 | ಮೆ. ಎಸ್.ಎಮ್.ಸಿ ಇನ್ಫ್ರಾಸ್ಟ್ರಕ್ಚರ್ ಪ್ರೈವೆಟ್ ಲಿಮಿಟೆಡ್ | 05.03.2019 | 30.09.2023 | 35.29 | 89.9% | 33.27 | * ಮೊದಲನೇ ಹಾಗೂ ಎರಡನೇ ಕೋವಿಡ್-19 ಲಾಕ್‌ಡೌನ್ ಪರಿಣಾಮದಿಂದ ಕಾರ್ಮಿಕರ ಹಾಗೂ ಸಲಕರಣೆಗಳ ಕೊರತೆ.<br>* ಮೆಸ್ಕಾಂಇಲಾಖೆಯ ಅನುಮತಿಯಲ್ಲಿ ವಿಳಂಬ.<br>ಕಾಮಗಾರಿಯು ಪೂರ್ಣಗೊಂಡಿರುತ್ತದೆ. ಪ್ರಾಯೋಗಿಕ ಕಾರ್ಯಚರಣೆ ಪ್ರಗತಿಯಲ್ಲಿದೆ. |

ಅನುಬಂಧ-1, ಮಂಗಳೂರು ಮಹಾನಗರದಲ್ಲಿ ಅಮೃತ್ ಮತ್ತು ಎಡಿಬಿ ಯೋಜನೆಯಲ್ಲಿ ಕೈಗೊಂಡಿರುವ ಕಾಮಗಾರಿಗಳ ವಿವರ

| ಕ್ರಮ ಸಂಖ್ಯೆ | ಕಾಮಗಾರಿಯ ಹೆಸರು | ಗುತ್ತಿಗೆದಾರರು | ಕಾಮಗಾರಿ ಪ್ರಾರಂಭ ದಿನಾಂಕ | ಕಾಮಗಾರಿ ಮುಕ್ತಾಯ ದಿನಾಂಕ | ಗುತ್ತಿಗೆ ಮೊತ್ತ(ರೂ. ಕೋಟಿಗಳಲ್ಲಿ) | ಭೌತಿಕ ಪ್ರಗತಿ | ಆರ್ಥಿಕ ಪ್ರಗತಿ(ರೂ. ಕೋಟಿಗಳಲ್ಲಿ) | ವಿಳಂಬಕ್ಕೆ ಕಾರಣಗಳು |
|---|---|---|---|---|---|---|---|---|
| ಎಡಿಬಿ | | | | | | | | |
| 1 | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಿತರಣಾ ಜಾಲಗಳನ್ನು ಬಲಪಡಿಸಿ 24X7 ಕುಡಿಯುವ ನೀರು ಸರಬರಾಜು ವ್ಯವಸ್ಥೆಯನ್ನು ಮತ್ತು 8 ವರ್ಷಗಳ ಕಾರ್ಯಾಚರಣೆ ಹಾಗೂ ನಿರ್ವಹಣೆ ಕಾಮಗಾರಿ. ಪ್ಯಾಕೇಜ್ ಸಂಖ್ಯೆ : 02MNG01 | ಮೆ. ಸುಯೆಜ್ ಪ್ರೊಜೆಕ್ಟ್ ಪ್ರೈವೇಟ್ ಲಿಮಿಟೆಡ್-ಸುಯೆಜ್ ಇಂಡಿಯಾ ಪ್ರೈವೇಟ್ ಲಿಮಿಟೆಡ್, ಡಿ.ಆರ್.ಎಸ್. ಇನ್ಫ್ರಾಟೆಕ್ ಪ್ರೈವೇಟ್ ಲಿಮಿಟೆಡ್, (Joint Venture) | 24.12.2019 | 23.05.2024 | 617.22 | 66.96% | 353.02 | * ಮೊದಲನೇ ಹಾಗೂ ಎರಡನೇ ಕೋವಿಡ್-19 ಲಾಕ್‌ಡೌನ್ ಪರಿಣಾಮದಿಂದ ಕಾರ್ಮಿಕರ ಹಾಗೂ ಸಲಕರಣೆಗಳ ಕೊರತೆ.<br>* ರಾಷ್ಟ್ರೀಯ ಹೆದ್ದಾರಿ, ರೈಲ್ವೇ ಹಾಗೂ ಇತರೆ ಇಲಾಖೆಗಳ ಅನುಮತಿಯಲ್ಲಿ ವಿಳಂಬ.<br>* ಮೇಲ್ಮಟ್ಟದ ಹಾಗೂ ನೆಲಮಟ್ಟದ ಜಲಸಂಗ್ರಹಗಾರ ಹಾಗೂ ನೀರು ಶುದ್ಧೀಕರಣ ಘಟಕ ನಿರ್ಮಾಣ ಜಾಗಗಳ (ಖಾಸಗಿ ಮತ್ತು NMPA) ಭೂಹಸ್ತಾಂತರದಲ್ಲಿ ವಿಳಂಬ.<br>* ಹರೇಕಳ ಅಡ್ಯಾರ್ ಕಿಂಡಿ ಅಣೆಕಟ್ಟಿನ ಬಳಿ 125 MLD ಸಾಮರ್ಥ್ಯದ ನೀರು ಶುದ್ಧೀಕರಣ ಘಟಕ (WTP) ನಿರ್ಮಾಣ ಕಾಮಗಾರಿಯನ್ನು ಹೊಸದಾಗಿ ಸೇರಿಸಿದ್ದು, ಮೊದಲ ಹಂತದಲ್ಲಿ ಸರ್ಕಾರವು ದಿನಾಂಕ 02.01.2024 ರಂದು ಅನುಮೋದನೆ ನೀಡಿರುತ್ತದೆ. |
| 2 | ಕೊಳಚೆ ನೀರಿನ ಹಳೆಯ ಏರುಕೊಳವೆಯನ್ನು ಬದಲಾಯಿಸುವುದು ಹಾಗೂ ಒಳಚರಂಡಿ ವ್ಯವಸ್ಥೆಯನ್ನು ಪುನಶ್ಚೇತನಗೊಳಿಸುವ ಕಾಮಗಾರಿ. ಪ್ಯಾಕೇಜ್ ಸಂಖ್ಯೆ : 02MNG02 | ಮೆ. ಡಿ.ಆರ್.ಎಸ್. ಇನ್ಫ್ರಾಟೆಕ್ ಪ್ರೈವೇಟ್ ಲಿಮಿಟೆಡ್ | 06.06.2018) | 27.07.2021 | 84.56 | 100% | 84.56 | ಕಾಮಗಾರಿಯು ಪೂರ್ಣಗೊಂಡಿರುತ್ತದೆ. |

ಕಾರ್ಯವ್ಯವಸ್ಥಾಪಕರು
ಕ್ವಿಮಿಪ್,ಕೆಯುಐಡಿಎಫ್‌ಸಿ.

# ಅನುಬಂಧ-2

ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ "ಅಮೃತ್" ಯೋಜನೆಯಡಿ ಪಾಲಿಕೆ ವತಿಯಿಂದ ಕೈಗೊಂಡಿರುವ ಕಾಮಗಾರಿಗಳ ವಿವರಗಳು ಈ ಕೆಳಗಿನಂತಿವೆ.

| ಕ್ರ.ಸಂ | ಕಾಮಗಾರಿಯ ಹೆಸರು | ಗುತ್ತಿಗೆ ಮೊತ್ತ ಲಕ್ಷಗಳಲ್ಲಿ | ಷರಾ |
|---|---|---|---|
| 1 | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕುಂಜತ್ತಬೈಲ್ ಉತ್ತರ ಕೆ.ಹೆಚ್.ಬಿ ನಿವೇಶನದಲ್ಲಿರುವ ಪಾರ್ಕ್ ಅಭಿವೃದ್ಧಿ ಕಾಮಗಾರಿ. | 12.60 | ಕಾಮಗಾರಿ ಪೂರ್ಣಗೊಂಡಿರುತ್ತದೆ |
| 2 | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಸುರತ್ಕಲ್ ಪಶ್ಚಿಮ ರಿಜೇಂಟ್ ಪಾರ್ಕ್ ಅಭಿವೃದ್ಧಿ ಕಾಮಗಾರಿ. | 8.00 | ಕಾಮಗಾರಿ ಪೂರ್ಣಗೊಂಡಿರುತ್ತದೆ. |
| 3 | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕಾಟಿಪಳ್ಳ 7ನೇ ಬ್ಲಾಕ್ ಪಾರ್ಕ್ ಅಭಿವೃದ್ಧಿ ಕಾಮಗಾರಿ. | 56.00 | ಕಾಮಗಾರಿ ಪೂರ್ಣಗೊಂಡಿರುತ್ತದೆ. |
| 4 | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ವಿ.ನಂ.7 ಇಡ್ಯಾ ಪಶ್ಚಿಮ ಹೊಸಬೆಟ್ಟು ಬೃಹತ್ ಚರಂಡಿ ಅಭಿವೃದ್ಧಿ, ವಿ.ನಂ.6 ಇಡ್ಯಾ ಪೂರ್ವ ಚೊಕ್ಕಬೆಟ್ಟು ಬೃಹತ್ ಚರಂಡಿ ಅಭಿವೃದ್ಧಿ. | 399.00 | ಕಾಮಗಾರಿ ಪೂರ್ಣಗೊಂಡಿರುತ್ತದೆ. |
| 5 | ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಕದ್ರಿ ಗ್ರಾಮದಲ್ಲಿರುವ ಕದ್ರಿ ಪಾರ್ಕ್ ಅಭಿವೃದ್ಧಿ ಕಾಮಗಾರಿ. | 106.00 | ಕಾಮಗಾರಿ ಪೂರ್ಣಗೊಂಡಿರುತ್ತದೆ. |

9/2/24

ಸಹಾಯಕ ನಿರ್ದೇಶಕರು, ಅಭಿವೃದ್ಧಿ
ಪೌರಾಡಳಿತ ನಿರ್ದೇಶನಾಲಯ,
ಬೆಂಗಳೂರು.